**A**

**CCE RR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಸೆಪ್ಟೆಂಬರ್, 2020**

**S.S.L.C. EXAMINATION, SEPTEMBER, 2020**

**ಮಾದರಿ ಉತ್ತರಗಳು**

**MODEL ANSWERS**

ದಿನಾಂಕ : 23. 09. 2020 ] **ಸಂಕೇತ ಸಂಖ್ಯೆ : 85-K**

Date : 23. 09. 2020 ] **CODE NO. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 8 × 1 = 8 | |
| 1. | ಸಾಲ್‌ಬಾಯ್ ಒಪ್ಪಂದದೊಂದಿಗೆ ಕೊನೆಗೊಂಡ ಯುದ್ಧ<br>(A) ಎರಡನೇ ಆಂಗ್ಲೋ–ಮರಾಠ ಯುದ್ಧ<br>(B) ಎರಡನೇ ಆಂಗ್ಲೋ–ಸಿಖ್ ಯುದ್ಧ<br>(C) ಮೊದಲನೇ ಆಂಗ್ಲೋ–ಮರಾಠ ಯುದ್ಧ<br>(D) ಮೊದಲನೇ ಆಂಗ್ಲೋ–ಮೈಸೂರು ಯುದ್ಧ<br>***ಉತ್ತರ :*** (C) ಮೊದಲನೇ ಆಂಗ್ಲೋ–ಮರಾಠ ಯುದ್ಧ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 1938 ರ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದವರು<br>(A) ಸರ್ದಾರ್ ವಲ್ಲಭಬಾಯಿ ಪಟೇಲ್ (B) ಡಾ. ಬಿ.ಆರ್. ಅಂಬೇಡ್ಕರ್<br>(C) ಬಾಲಗಂಗಾಧರ ತಿಲಕ್ (D) ಸುಭಾಷ್ ಚಂದ್ರ ಬೋಸ್<br>***ಉತ್ತರ :*** (D) ಸುಭಾಷ್ ಚಂದ್ರ ಬೋಸ್ | 1 |
| 3. | 1789 ರ ಫ್ರಾನ್ಸಿನ ಮಹಾಕ್ರಾಂತಿಯ ಪ್ರಮುಖ ಉದ್ದೇಶ<br>(A) ವಿಶ್ವಸಂಸ್ಥೆಯ ಸ್ಥಾಪನೆ (B) ಮಾನವ ಹಕ್ಕುಗಳ ಸಂರಕ್ಷಣೆ<br>(C) ವಿದೇಶಿಯರ ಆಕ್ರಮಣ ತಡೆಯುವುದು (D) ರಾಷ್ಟ್ರ ಸಂಘದ ಸ್ಥಾಪನೆ<br>***ಉತ್ತರ :*** (B) ಮಾನವ ಹಕ್ಕುಗಳ ಸಂರಕ್ಷಣೆ | 1 |
| 4. | ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು<br>(A) ಮೇಧಾ ಪಾಟ್ಕರ್ (B) ಡಾ. ಶಿವರಾಮ ಕಾರಂತ<br>(C) ಕುಸುಮಾ ಸೊರಬ (D) ಸುಂದರಲಾಲ್ ಬಹುಗುಣ<br>***ಉತ್ತರ :*** (A) ಮೇಧಾ ಪಾಟ್ಕರ್ | 1 |
| 5. | ಮಕ್ಕಳ ಸಹಾಯವಾಣಿಗೆ ಕರೆ ಮಾಡಲು ಇರುವ ದೂರವಾಣಿ ಸಂಖ್ಯೆ<br>(A) 1098 (B) 1090<br>(C) 1089 (D) 1097<br>***ಉತ್ತರ :*** (A) 1098 | 1 |
| 6. | ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದು<br>(A) ಆಂಧಿಸ್ – ಪಶ್ಚಿಮ ಬಂಗಾಳ<br>(B) ಕಾಲಬೈಸಾಕಿ – ಪಂಜಾಬ್<br>(C) ಮಾವಿನ ಹೊಯ್ಲು – ತಮಿಳುನಾಡು<br>(D) ಕಾಫಿಯ ಹೂಮಳೆ – ಕರ್ನಾಟಕ<br>***ಉತ್ತರ :*** (D) ಕಾಫಿಯ ಹೂಮಳೆ – ಕರ್ನಾಟಕ | 1 |
| 7. | 2014 ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ<br>(A) 0·586 (B) 0·344<br>(C) 0·562 (D) 0·856<br>***ಉತ್ತರ :*** (A) 0·586 | 1 |
| 8. | 'ಬಿಳಿಕ್ರಾಂತಿಯ ಪಿತಾಮಹ' ಎಂದು ಪ್ರಖ್ಯಾತರಾದ ಉದ್ಯಮಿ<br>(A) ಡಾ. ಪ್ರತಾಪ್ ರೆಡ್ಡಿ (B) ನಾರಾಯಣ ಮೂರ್ತಿ<br>(C) ವರ್ಗೀಸ್ ಕುರಿಯನ್ (D) ಅಜೀಮ್ ಪ್ರೇಮ್‌ಜಿ<br>***ಉತ್ತರ :*** (C) ವರ್ಗೀಸ್ ಕುರಿಯನ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $8 \times 1 = 8$ | |
| 9. | 1798 ರ ನಂತರ ಹೈದರಾಬಾದ್ ಸಂಸ್ಥಾನವು ತನ್ನ ಪ್ರಾಂತ್ಯದಲ್ಲಿ ಬ್ರಿಟಿಷರ ಒಂದು ಸೈನಿಕ ತುಕಡಿಯನ್ನು ಇರಿಸಿಕೊಳ್ಳಬೇಕಾಗಿತ್ತು. ಏಕೆ ?<br>***ಉತ್ತರ :***<br>ಹೈದರಾಬಾದ್ ಸಂಸ್ಥಾನವು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿತ್ತು. | 1 |
| 10. | ರಾಮಕೃಷ್ಣ ಮಠ (ಮಿಷನ್) ವನ್ನು ಏಕೆ ಸ್ಥಾಪಿಸಲಾಯಿತು ?<br>***ಉತ್ತರ :***<br>ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸಲು. | 1 |
| 11. | ಆಹಾರ ಮತ್ತು ಕೃಷಿ ಸಂಸ್ಥೆಯ ( FAO ) ಮುಖ್ಯ ಉದ್ದೇಶವೇನು ?<br>***ಉತ್ತರ :***<br>ಬಡತನ, ಹಸಿವು ಹಾಗೂ ಅಪೌಷ್ಠಿಕತೆಯ ವಿರುದ್ಧ ಹೋರಾಡಲು. | 1 |
| 12. | ಕೈಗಾ ಅಣುಸ್ಥಾವರ ವಿರೋಧಿ ಚಳುವಳಿಯನ್ನು ಏಕೆ ನಡೆಸಲಾಯಿತು ?<br>***ಉತ್ತರ :***<br>ಅಣು ವಿಕಿರಣದಿಂದಾಗುವ ಅರಣ್ಯ ನಾಶ, ಪರಿಸರ ಮಾಲಿನ್ಯ ಮತ್ತು ಜೀವ ಪ್ರಭೇದಗಳ ನಾಶ ತಡೆಯಲು. | 1 |
| 13. | ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು ಹೇಗೆ ರಚನೆಯಾಗಿದೆ ?<br>***ಉತ್ತರ :***<br>ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯಲ್ಲಿ ರಚನೆಯಾಗುತ್ತದೆ. | 1 |
| 14. | ಜನಸಾಂದ್ರತೆಯನ್ನು ವ್ಯಾಖ್ಯಾನಿಸಿ.<br>***ಉತ್ತರ :***<br>ಪ್ರತಿ ಚದರ ಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆ. | 1 |
| 15. | ಒಂದು ದೇಶದ ತಲಾವರಮಾನವನ್ನು ಹೇಗೆ ಕಂಡುಹಿಡಿಯುತ್ತಾರೆ ?<br>***ಉತ್ತರ :***<br>ಒಟ್ಟು ರಾಷ್ಟ್ರೀಯ ಆದಾಯವನ್ನು ಆ ದೇಶದ ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ತಲಾ ಆದಾಯ ಸಿಗುತ್ತದೆ. | 1 |
| 16. | ಪ್ರತಿ ವರ್ಷ ಮಾರ್ಚ್ 15ನೇ ತಾರೀಖಿನಂದು ವಿಶ್ವಗ್ರಾಹಕರ ದಿನವೆಂದು ಏಕೆ ಆಚರಿಸಲಾಗುತ್ತಿದೆ ?<br>***ಉತ್ತರ :***<br>* ಜಾನ್ ಎಫ್ ಕೆನಡಿಯವರು ನಾಲ್ಕು ಹಕ್ಕುಗಳ ನೀಡುವ ವಿಧೇಯಕವನ್ನು ಅಂಗೀಕರಿಸಿದ್ದರು.<br>* ಗ್ರಾಹಕರ ಹಕ್ಕು ಘೋಷಣೆ (ಯಾವುದಾದರೂ ಒಂದು ಅಂಶ) | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | ***ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು :*** $8 \times 2 = 16$ | |
| 17. | ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಯೂರೋಪಿಯನ್ನರನ್ನು ಪ್ರೇರೇಪಿಸಿದ ಅಂಶಗಳಾವುವು ?<br>***ಉತ್ತರ :***<br>* ಕಾನ್‌ಸ್ಟಾಂಟಿನೋಪಲ್ ನಗರವನ್ನು ಟರ್ಕರು ವಶಪಡಿಸಿಕೊಂಡರು<br>* ಸ್ಪೇನ್, ಪೋರ್ಚುಗಲ್ ಮತ್ತು ಇತರೆ ದೇಶಗಳು ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಯತ್ನಿಸಿದರು<br>* ರಾಜರುಗಳು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಿದರು<br>* ಹೊಸ ವೈಜ್ಞಾನಿಕ ಆವಿಷ್ಕಾರಗಳು | 2 |
| 18. | ಭಾರತದ ವಿಭಜನೆಯ ಕಾಲದಿಂದಲೂ ನಿರಾಶ್ರಿತರು ಒಂದು ಬಹು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದಾರೆ. ಸ್ಪಷ್ಟೀಕರಿಸಿ.<br>***ಉತ್ತರ :***<br>* 1947 ರಲ್ಲಿ ಭಾರತಕ್ಕೆ ಬಂದ ನಿರಾಶ್ರಿತರ ಸಂಖ್ಯೆ 6 ಮಿಲಿಯನ್<br>* 1947 ರಿಂದ 1971 ರವರೆಗೆ ಪೂರ್ವ ಪಾಕಿಸ್ತಾನದಿಂದ ಲಕ್ಷಾಂತರ ನಿರಾಶ್ರಿತರು ಬಂದರು<br>* 1971 ರ ಬಾಂಗ್ಲಾ ವಿಮೋಚನಾ ಯುದ್ಧ ಪರಿಣಾಮವಾಗಿ ಸುಮಾರು 10 ಲಕ್ಷ ನಿರಾಶ್ರಿತರು ಬಂದರು<br>* ನೆಹರೂರವರ ಕಾಲದಿಂದಲೇ ಟಿಬೆಟಿಯನ್ನರು ಭಾರಂತಕ್ಕೆ ನಿರಾಶ್ರಿತರಾಗಿ ಬಂದಿದ್ದಾರೆ<br>* 1,20,000 ಟಿಬೆಟಿಯನ್ ನಿರಾಶ್ರಿತರು ಭಾರತದಲ್ಲಿದ್ದಾರೆ<br>* ದೇಶವು ದೊಡ್ಡ ಆರ್ಥಿಕ ಸಂಕಷ್ಟಗಳಿಗೆ ಒಳಗಾಗಿದ್ದಾಗಲೂ ನಿರಾಶ್ರಿತರಿಗೆ ಪರಿಹಾರ ನೀಡಲಾಗಿದೆ<br>(ಯಾವುದಾದರೂ ನಾಲ್ಕುಅಂಶಗಳು) $4 \times \frac{1}{2}$ | 2 |
| 19. | ನಮ್ಮ ದೇಶದ ವಿದೇಶಾಂಗ ನೀತಿಯ ಬದಲಾವಣೆಗೆ ಹಲವಾರು ಅಂಶಗಳು ಪ್ರಭಾವ ಬೀರಿವೆ. ಹೇಗೆ ?<br>***ಅಥವಾ***<br>ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಸಚಿವ ಸಂಪುಟವೆಂದು ಏಕೆ ಪರಿಗಣಿಸಲಾಗಿದೆ ?<br>***ಉತ್ತರ :***<br>* ರಾಷ್ಟ್ರೀಯ ಹಿತಾಸಕ್ತಿಗಳು<br>* ಭೌಗೋಳಿಕ ಅಂಶಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ರಾಜಕೀಯ ಪರಿಸ್ಥಿತಿ<br>✳ ಆರ್ಥಿಕ ವ್ಯವಸ್ಥೆ<br>✳ ರಕ್ಷಣಾ ಸಾಮರ್ಥ್ಯ<br>✳ ಜನಾಭಿಪ್ರಾಯ<br>✳ ಅಂತರರಾಷ್ಟ್ರೀಯ ಪರಿಸರ (ಯಾವುದಾದರೂ ನಾಲ್ಕುಅಂಶಗಳು) 4 × ½ | 2 |
| | ***ಅಥವಾ*** | |
| | ✳ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ<br>✳ ಶಾಂತಿ ಪಾಲನಾ ಪಡೆಯ ನಿಯೋಜನೆ<br>✳ ಶಾಂತಿ ಹಾಗೂ ಸುವ್ಯವಸ್ಥೆ ಕಾಪಾಡುವುದು<br>✳ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ<br>✳ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುವುದು<br>(ಯಾವುದಾದರೂ ನಾಲ್ಕುಅಂಶಗಳು) 4 × ½ | 2 |
| 20. | ಮಕ್ಕಳ ಸಾಗಾಣಿಕೆಯು ಅವರ ಸರ್ವತೋಮುಖ ಬೆಳವಣಿಗೆಗೆ ಮಾರಕವಾಗಿದೆ. ಹೇಗೆ ?<br>***ಅಥವಾ***<br>ಶ್ರಮ ವಿಭಜನೆಯು ಅತ್ಯಂತ ಉಪಯುಕ್ತವಾದದ್ದು. ಹೇಗೆ ?<br>***ಉತ್ತರ :***<br>✳ ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ<br>✳ ಮಕ್ಕಳ ಸಾವು<br>✳ ಗಂಭೀರ ರೋಗದ ಅಪಾಯ<br>✳ ಲೈಂಗಿಕ ಕಾಯಿಲೆ<br>✳ ಅನಗತ್ಯ ಗರ್ಭಧಾರಣೆ<br>✳ ಮಾದಕ ವ್ಯಸನಗಳಿಗೆ ಬಲಿ, ಕೊಲೆ (ಯಾವುದಾದರೂ ನಾಲ್ಕುಅಂಶಗಳು) 4 × ½ | 2 |
| | ***ಅಥವಾ*** | |
| | ✳ ಆರ್ಥಿಕ ಲಾಭ ಪಡೆಯಲು ಸಹಾಯಕವಾಗಿದೆ<br>✳ ವರ್ಗವ್ಯವಸ್ಥೆಯ ಸೃಷ್ಟಿ ಮಾಡಿದೆ<br>✳ ವ್ಯಾಪಾರ ವಾಣಿಜ್ಯೋದ್ಯಮಗಳು ವಿಸ್ತಾರಗೊಂಡಿವೆ<br>✳ ಬಂಡವಾಳವನ್ನು ತೊಡಗಿಸಿ ಹೆಚ್ಚು ಲಾಭಗಳಿಸಲು ಅವಕಾಶ<br>✳ ವಿಶೇಷ ಪರಿಣಿತಿಗೆ ದಾರಿ<br>✳ ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಬೆಳವಣಿಗೆ<br>(ಯಾವುದಾದರೂ ನಾಲ್ಕುಅಂಶಗಳು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಭಾರತದ ಪೂರ್ವ ಕರಾವಳಿ ಮೈದಾನಗಳು ಪಶ್ಚಿಮ ಕರಾವಳಿ ಮೈದಾನಗಳಿಗಿಂತ ಹೇಗೆ ವಿಭಿನ್ನವಾಗಿವೆ ?<br>***ಉತ್ತರ :***<br>***ಪೂರ್ವ ಕರಾವಳಿ*** / ***ಪಶ್ಚಿಮ ಕರಾವಳಿ***<br>* ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿವರೆಗೆ / * ಕಛ್‌ನಿಂದ ಕನ್ಯಾಕುಮಾರಿವರೆಗೆ<br>* ಪೂರ್ವ ಘಟ್ಟ ಮತ್ತು ಬಂಗಾಳಕೊಲ್ಲಿಗಳ ನಡುವೆ / * ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ<br>* ಅಗಲವಾಗಿವೆ / * ಕಿರಿದಾಗಿದ್ದು, ಕಡಿದಾದ ಇಳಿಜಾರು<br>* ಉತ್ತರ ಸರ್‌ಕಾರ್ ಮತ್ತು ಕೋರಮಂಡಲ ತೀರಗಳು / * ಕೊಂಕಣತೀರ, ಕರ್ನಾಟಕ ತೀರ ಮಲಬಾರ್ ತೀರ<br>* ನದಿ ಮುಖಜ ಭೂಮಿಯನ್ನು ಹೊಂದಿದೆ / * ನದಿ ಮುಖಜ ಭೂಮಿಯನ್ನು ಹೊಂದಿಲ್ಲ<br>(ಪ್ರತಿಯೊಂದರಲ್ಲೂ ಯಾವುದಾದರೂ ಎರಡು–ಎರಡು ವ್ಯತ್ಯಾಸಗಳು) 1 + 1 | 2 |
| 22. | ಕೆಳಗಿನವುಗಳನ್ನು ವೈಯಕ್ತಿಕ ಸಂಪರ್ಕ ಮತ್ತು ಸಮುದಾಯ ಸಂಪರ್ಕಗಳ ಅಡಿಯಲ್ಲಿ ವಿಂಗಡಿಸಿ ಬರೆಯಿರಿ. (ಅಂಚೆ, ದೂರದರ್ಶನ, ಫ್ಯಾಕ್ಸ್, ಆಕಾಶವಾಣಿ)<br>***ಉತ್ತರ :***<br>***ವೈಯಕ್ತಿಕ ಸಂಪರ್ಕ*** / ***ಸಮುದಾಯ ಸಂಪರ್ಕ***<br>* ಅಂಚೆ / * ದೂರದರ್ಶನ<br>* ಫ್ಯಾಕ್ಸ್ / * ಆಕಾಶವಾಣಿ | 2 |
| 23. | ಸಾರ್ವಜನಿಕ ವೆಚ್ಚದ ಉದ್ದೇಶವು ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಸ್ಪಷ್ಟೀಕರಿಸಿ.<br>***ಉತ್ತರ :***<br>* ಆರ್ಥಿಕ ಬೆಳವಣಿಗೆ<br>* ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು<br>* ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ<br>* ಸಂತುಲಿತ ಪ್ರಾದೇಶಿಕ ಬೆಳವಣಿಗೆ<br>* ಸಾಮಾಜಿಕ, ಆರ್ಥಿಕ, ಮೂಲಭೂತ ಸೌಕರ್ಯ<br>* ಸಂಪೂರ್ಣ ಉದ್ಯೋಗ ಸಾಧಿಸುವುದು<br>* ಸಾಮಾಜಿಕ ಕಲ್ಯಾಣ (ಯಾವುದಾದರೂ ನಾಲ್ಕುಅಂಶಗಳು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ವಿವಿಧ ಬ್ಯಾಂಕು ಖಾತೆಗಳನ್ನು ಹೆಸರಿಸಿ.<br>***ಉತ್ತರ :***<br>* ಉಳಿತಾಯ ಖಾತೆ<br>* ಚಾಲ್ತಿ ಖಾತೆ<br>* ಆವರ್ತ ಠೇವಣಿ ಖಾತೆ<br>* ನಿಶ್ಚಿತ ಠೇವಣಿ ಖಾತೆ | 2 |
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** $9 \times 3 = 27$ | |
| 25. | ಬ್ರಿಟಿಷರ ಭೂಕಂದಾಯ ಪದ್ಧತಿಗಳು ಭಾರತೀಯ ಕೃಷಿ ಮೇಲೆ ಪರಿಣಾಮ ಬೀರಿತ್ತು. ಸ್ಪಷ್ಟೀಕರಿಸಿ.<br>***ಉತ್ತರ :***<br>* ಜಮೀನ್ದಾರಿ ಸಮುದಾಯ ಸೃಷ್ಠಿಯಾಯಿತು<br>* ರೈತರು ನಿರ್ಗತಿಕರಾದರು<br>* ಭೂಮಿ ಮಾರಾಟದ ವಸ್ತುವಾಯಿತು<br>* ಜಮೀನ್ದಾರರೂ ಕೂಡ ತಮ್ಮ ಜಮೀನನ್ನು ಕಳೆದುಕೊಂಡರು<br>* ಕೃಷಿ ಕ್ಷೇತ್ರ ವಾಣಿಜ್ಯೀಕರಣಗೊಂಡಿತು<br>* ಹಣದ ಲೇವಾದೇವಿಗಾರರು ಬಲಿಷ್ಠರಾದರು<br>* ರೈತರು ಮತ್ತು ರೈತ ಕೂಲಿ ಕಾರ್ಮಿಕರಿಗೆ ನಿರಂತರವಾಗಿ ಕೆಲಸ ಸಿಗಲಿಲ್ಲ<br>* ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು<br>* ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ತೆರಿಗೆ ಪಾವತಿಸಬೇಕಾಗಿತ್ತು<br>* ಬರಗಾಲ ಮತ್ತು ಅತಿವೃಷ್ಟಿಯ ಸಂದರ್ಭದಲ್ಲಿ ಕಂದಾಯ ಪಾವತಿಸಬೇಕಾಗಿತ್ತು<br>(ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| 26. | ಮೂರನೇ ಮತ್ತು ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧಗಳು ಮೈಸೂರಿನ ಟಿಪ್ಪು ಸುಲ್ತಾನನ ಪ್ರಾಬಲ್ಯ ಕುಗ್ಗಿಸಿತು. ಸಮರ್ಥಿಸಿ.<br>***ಅಥವಾ***<br>ಭಾರತೀಯ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಅನಿಬೆಸೆಂಟ್‌ರವರ ಕೊಡುಗೆ ಅವಿಸ್ಮರಣೀಯವಾದದ್ದು. ಸಮರ್ಥಿಸಿ.<br>***ಉತ್ತರ :***<br>* ಕಾರ್ನ್‌ವಾಲಿಸನು ಬೆಂಗಳೂರಿನ ಕೋಟೆಯನ್ನು ಹಾಳುಗೆಡವಿದನು<br>* ಇಂಗ್ಲಿಷರ ಸಂಘಟಿತ ಸೈನ್ಯ ರಾತ್ರಿ ವೇಳೆಯಲ್ಲಿ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ಟಿಪ್ಪು ಅಸಮಾನ ಷರತ್ತುಗಳನ್ನು ಹೊಂದಿದ್ದ ಶ್ರೀರಂಗಪಟ್ಟಣದ ಒಪ್ಪಂದಕ್ಕೆ ಸಹಿ ಹಾಕಿದನು<br>✳ ಟಿಪ್ಪು ತನ್ನ ಅರ್ಧ ರಾಜ್ಯವನ್ನು ಶತ್ರುಗಳಿಗೆ ಬಿಟ್ಟುಕೊಟ್ಟನು<br>✳ 3 ಕೋಟಿ ಯುದ್ಧ ನಷ್ಟ ಕೊಡಬೇಕಾಯಿತು<br>✳ ಇಬ್ಬರು ಗಂಡು ಮಕ್ಕಳ ಒತ್ತೆ<br>✳ ಒತ್ತೆಯಾಗಿದ್ದ ಸೈನಿಕರ ಬಿಡುಗಡೆ<br>✳ ಟಿಪ್ಪು ಸಹಾಯಕ ಸೈನ್ಯಪದ್ಧತಿಯನ್ನು ವಿರೋಧಿಸಿದನು<br>✳ ಬ್ರಿಟಿಷರ ಸಂಘಟಿತ ಸೈನ್ಯ ಕೋಟೆಯನ್ನು ಭೇದಿಸಿತು<br>✳ 1799 ರಲ್ಲಿ ಬ್ರಿಟಿಷರು ಟಿಪ್ಪುವನ್ನು ಸೋಲಿಸಿ ಕೊಂದು ಹಾಕಿದರು<br>(ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| | ***ಅಥವಾ*** | |
| | ✳ ಅನಿಬೆಸೆಂಟರು ವೇದಾಂತಶಾಸ್ತ್ರದ ಬಗ್ಗೆ ವಿಶೇಷ ಜ್ಞಾನ ಹೊಂದಿದ್ದರು<br>✳ ಭಾರತೀಯ ಸಂಸ್ಕೃತಿ ಶ್ರೇಷ್ಠವಾದದ್ದೆಂದು ಪ್ರತಿಪಾದಿಸಿದರು<br>✳ ಹಿಂದೂ ಧರ್ಮದ ಪುನರುತ್ಥಾನ ಚಳುವಳಿ<br>✳ ಹಿಂದೂ ಮತ್ತು ಬೌದ್ಧ ಧರ್ಮಗಳ ತುಲನಾತ್ಮಕ ಅಧ್ಯಯನ<br>✳ ಭಗವದ್ಗೀತೆಯನ್ನು ಇಂಗ್ಲಿಷಿಗೆ ಅನುವಾದ ಮಾಡಿದರು<br>✳ ಶ್ವೇತ ಸರಸ್ವತಿ<br>✳ ಎಲ್ಲಾ ವರ್ಗಗಳಿಗೂ ಶಿಕ್ಷಣ ಉದ್ದೇಶಕ್ಕಾಗಿ ಸೆಂಟ್ರಲ್ ಹಿಂದೂ ಕಾಲೇಜನ್ನು ಪ್ರಾರಂಭಿಸಿದರು<br>✳ ನ್ಯೂ ಇಂಡಿಯಾ ಮತ್ತು ಕಾಮನ್ ವ್ಹೀಲ್ ಪತ್ರಿಕೆಗಳ ಆರಂಭ<br>✳ ಹೋಂರೂಲ್ ಚಳುವಳಿಯ ಆರಂಭ<br>✳ ಭಾರತದ ಸ್ವಾತಂತ್ರ ಚಳುವಳಿಯಲ್ಲಿ ಸಕ್ರಿಯ<br>✳ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದರು<br>(ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| 27. | 20ನೇ ಶತಮಾನದಲ್ಲಿ ಚೀನಾ ಹೇಗೆ ಅಭಿವೃದ್ಧಿ ಹೊಂದಿತು ?<br>***ಉತ್ತರ :***<br>✳ ಸನ್‌ಯಾತ್–ಸೇನ್‌ನ ಸಾಮ್ರಾಜ್ಯಕ್ಕಾಗಿ ವಿರೋಧಿ ಚಳುವಳಿ<br>✳ ರೈತರ ಮತ್ತು ಕಾರ್ಮಿಕರ ಚಳುವಳಿ<br>✳ ಮಾವೋತ್ಸೆ ತುಂಗನ ದೀರ್ಘ ಪಯಣ<br>✳ ಭೂ ಸುಧಾರಣೆ ಜಾರಿಯಿಂದ ಜನರಿಗೆ ಭೂಮಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | * ಮಾವೋತ್ಸೆ ತುಂಗನಿಂದ ಜನತಾ ಗಣತಂತ್ರ ಸ್ಥಾಪನೆ<br>* ಸಾಮೂಹಿಕ ಕೃಷಿ ಪದ್ಧತಿ ಜಾರಿ<br>* ಉಚಿತ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯ<br>* ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಹತ್ವ<br>* ಮುನ್ನಡೆ ಮಹಾಜಿಗಿತ ಯೋಜನೆ<br>* ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತನೆ<br>* ಸಾಂಸ್ಕೃತಿಕ ಕ್ರಾಂತಿ<br>(ಯಾವುದಾದರೂ ಆರು ಅಂಶಗಳು) | $6 \times \frac{1}{2}$ | 3 |
| 28. | ಭಾರತ ಮತ್ತು ರಷ್ಯಾ ದೇಶಗಳು ಉತ್ತಮ ಬಾಂಧವ್ಯ ಹೊಂದಿವೆ ? ವಿವರಿಸಿ.<br>***ಉತ್ತರ :***<br>* ಭಾರತದ ಅಲಿಪ್ತ ನೀತಿ<br>* ಆರ್ಥಿಕ ರಾಜಕೀಯ ಹಾಗೂ ಇತರೆ ಕ್ಷೇತ್ರಗಳಲ್ಲಿ ಒಪ್ಪಂದ<br>* ಭಾರತದ ಮೇಲೆ ಚೀನಾ ದಾಳಿಯ ಖಂಡನೆ<br>* ಗೋವಾ ವಿಮೋಚನೆಗೆ ಸಹಕಾರ<br>* ತಾಷ್ಕೆಂಟಿನಲ್ಲಿ ನಡೆದ ಒಪ್ಪಂದಕ್ಕೆ ಸಹಕಾರ<br>* 20 ವರ್ಷಗಳ ಶಾಂತಿ ಒಪ್ಪಂದ<br>* ಭಿಲ್ಲಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಸಹಕಾರ<br>* ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವಕ್ಕೆ ಪ್ರಯತ್ನ<br>* ಕೈಗಾರಿಕೆ, ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ನೆರವು<br>(ಯಾವುದಾದರೂ ಆರು ಅಂಶಗಳು) | $6 \times \frac{1}{2}$ | 3 |
| 29. | ಇತ್ತೀಚಿನ ದಿನಗಳಲ್ಲಿ ಅಸ್ಪೃಷ್ಯತೆಯ ಸಮಸ್ಯೆ ಕಡಿಮೆಯಾಗುತ್ತಿದೆ. ಸ್ಪಷ್ಟೀಕರಿಸಿ.<br>***ಉತ್ತರ :***<br>* ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆ ನಿಷೇಧಿಸಿದೆ<br>* ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಜಾರಿಗೊಳಿಸಿದೆ<br>* ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ<br>* ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನ ಮತ್ತು ಸಮಾನತೆಯ ಹಕ್ಕು<br>* ಶೈಕ್ಷಣಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ<br>* ರಾಜ್ಯ ಸರ್ಕಾರಗಳಿಗೆ ವಿಶೇಷ ಜವಾಬ್ದಾರಿಗಳು | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಸಂವಿಧಾನದ 15, 16, 17 38 ಮತ್ತು 46 ನೇ ವಿಧಿಗಳು<br>* ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿ<br>* 25ನೇ ವಿಧಿ ಧಾರ್ಮಿಕ ಕೇಂದ್ರಗಳಿಗೆ ಪ್ರವೇಶಿಸುವ ಮುಕ್ತ ಅವಕಾಶ<br>(ಯಾವುದಾದರೂ ಆರು ಅಂಶಗಳು) 6 × ½ | 3 |
| 30. | ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶಗಳು ಕಡಿಮೆಯಾಗುತ್ತಿವೆ. ಏಕೆ ?<br>***ಉತ್ತರ :***<br>* ಕೃಷಿ ಕ್ಷೇತ್ರದ ವಿಸ್ತರಣೆ<br>* ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ<br>* ನೀರಾವರಿ ಯೋಜನೆಗಳ ನಿರ್ಮಾಣ<br>* ಕೈಗಾರಿಕೀಕರಣ<br>* ನಗರೀಕರಣ<br>* ಅತಿಯಾಗಿ ಮೇಯಿಸುವಿಕೆ<br>* ಕಾಡ್ಗಿಚ್ಚು<br>* ಕೀಟಗಳು ಮತ್ತು ರೋಗಗಳು<br>* ಮರಗಳ ಕಳ್ಳ ಸಾಗಣೆ<br>* ಅವೈಜ್ಞಾನಿಕವಾಗಿ ಮರಗಳ ಕಡಿಯುವುದು<br>(ಯಾವುದಾದರೂ ಆರು ಅಂಶಗಳು) 6 × ½ | 3 |
| 31. | ಬಹುತೇಕ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಒಡಿಸ್ಸಾ ಮತ್ತು ಪಶ್ಚಿಮ ಬಂಗಾಳದ ಪ್ರದೇಶಗಳಲ್ಲಿ ಕೇಂದ್ರಿಕೃತಗೊಂಡಿವೆ. ಏಕೆ ?<br>***ಅಥವಾ***<br>ಮಾನವ ಚಟುವಟಿಕೆಗಳು ಪ್ರವಾಹ ಮತ್ತು ಭೂಕುಸಿತಕ್ಕೆ ಕಾರಣವಾಗಿವೆ. ಸ್ಪಷ್ಟೀಕರಿಸಿ.<br>***ಉತ್ತರ :***<br>* ಕಬ್ಬಿಣದ ಅದಿರು ಪೂರೈಕೆ<br>* ಕಲ್ಲಿದ್ದಲು ಪೂರೈಕೆ<br>* ಜಲವಿದ್ಯುತ್ ಪೂರೈಕೆ<br>* ರೈಲು ಸಾರಿಗೆ<br>* ಬಂದರು ಸೌಲಭ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ನೀರು ಪೂರೈಕೆ<br>✳ ಕಡಿಮೆ ಕೂಲಿಗೆ ದುಡಿಯುವ ನುರಿತ ಕಾರ್ಮಿಕರು<br>✳ ಬಂಡವಾಳ ಮತ್ತು ಸ್ಥಳೀಯ ಮಾರುಕಟ್ಟೆ ಸೌಲಭ್ಯ<br>(ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| | **ಅಥವಾ**<br>*ಪ್ರವಾಹ :*<br>✳ ಅರಣ್ಯನಾಶ<br>✳ ಅವೈಜ್ಞಾನಿಕ ನೀರಾವರಿ<br>✳ ಅವೈಜ್ಞಾನಿಕ ಕೃಷಿ ಪದ್ಧತಿ<br>✳ ಒಡ್ಡು ಮತ್ತು ಅಣೆಕಟ್ಟುಗಳು ಒಡೆದು ಹೋಗುವುದು<br>✳ ಶೀಘ್ರಗತಿಯ ನಗರೀಕರಣ<br>*ಭೂಕುಸಿತಗಳು :*<br>✳ ಅರಣ್ಯ ನಾಶ<br>✳ ರೈಲು ರಸ್ತೆಗಳ ನಿರ್ಮಾಣ<br>✳ ಅಣೆಕಟ್ಟು ಜಲಾಶಯ ಮತ್ತು ವಿದ್ಯುತ್ ಯೋಜನೆಗಳ ನಿರ್ಮಾಣ<br>✳ ತೀವ್ರಗತಿಯ ಗಣಿಗಾರಿಕೆ ಮತ್ತು ಕಲ್ಲುಗಣಿಗಾರಿಕೆ<br>(ಪ್ರತಿಯೊಂದರಲ್ಲೂ ಯಾವುದಾದರೂ ಮೂರು ಅಂಶಗಳು) $1\frac{1}{2} + 1\frac{1}{2}$ | 3 |
| 32. | ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಗುಣಲಕ್ಷಣಗಳನ್ನು ತಿಳಿಸಿ.<br>**ಅಥವಾ**<br>ಹಣದ ವಿಕಾಸದ ವಿವಿಧ ಹಂತಗಳನ್ನು ತಿಳಿಸಿ.<br>***ಉತ್ತರ :***<br>✳ ಮೂರು ಹಂತದ ಪಂಚಾಯಿತಿ ವ್ಯವಸ್ಥೆ<br>✳ ನೇರ ಹಾಗೂ ನಿಯಮಿತ ಚುನಾವಣೆಗಳು<br>✳ ಸ್ಥಾನ ಮೀಸಲಾತಿ<br>✳ ಹಣಕಾಸು, ಮುಂಗಡಪತ್ರ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿ<br>✳ ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ ನೀಡಿಕೆ<br>✳ ಪಂಚಾಯತಿಯನ್ನು ವಿಸರ್ಜಿಸಲು ಅನುಸರಿಸುವ ಕ್ರಮ | 3 |
| | **ಅಥವಾ** | |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ∗ ಸಾಟಿ (ವಸ್ತು) ವಿನಿಮಯ ಪದ್ಧತಿ<br>∗ ವಸ್ತುರೂಪದ ಹಣ<br>∗ ಲೋಹದ ಹಣ<br>∗ ಕಾಗದದ ಹಣ<br>∗ ಬ್ಯಾಂಕ್ ಹಣ<br>∗ ಪ್ಲಾಸ್ಟಿಕ್ ಹಣ | 3 |
| 33. | ಜಾಗತೀಕರಣವು ಒಂದು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?<br>***ಅಥವಾ***<br>ಉದ್ದಿಮೆಗಾರನು ಒಂದು ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯ ಮಾಡುತ್ತಾನೆ ?<br>***ಉತ್ತರ :***<br>∗ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿದೆ<br>∗ ಜನರ ಜೀವನಮಟ್ಟ ಹೆಚ್ಚಿಸಲು ಸಹಾಯ ಮಾಡುತ್ತದೆ<br>∗ ಒಂದೇ ರೀತಿಯ ವಸ್ತುಗಳು ದೊರೆಯಲು ಅನುವು<br>∗ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ<br>∗ ಜನರ ವರಮಾನವನ್ನು ಹೆಚ್ಚಿಸುತ್ತದೆ<br>∗ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ<br>∗ ಸರಕುಗಳ ಬೆಲೆಗಳನ್ನು ಕಡಿಮೆ ಮಾಡುತ್ತದೆ<br>∗ ಉತ್ತಮ ಗುಣಮಟ್ಟದ ವಸ್ತುಗಳು ದೊರೆಯುತ್ತವೆ<br>∗ ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ ಬೆಳೆಸುತ್ತದೆ<br>(ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| | ***ಅಥವಾ***<br>∗ ಜನರ ಅನುಪಯುಕ್ತ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಣೆ<br>∗ ಅಧಿಕ ಪ್ರಮಾಣದ ಉದ್ಯೋಗಗಳ ಸೃಷ್ಠಿ<br>∗ ದೇಶದ ನಿವ್ವಳ ದೇಶೀಯ ಉತ್ಪನ್ನ ಹೆಚ್ಚಿಸುತ್ತಾರೆ<br>∗ ಜನರ ತಲಾವರಮಾನ ಹೆಚ್ಚಿಸುತ್ತಾರೆ<br>∗ ಹೊಸ ವಸ್ತುಗಳು ಮತ್ತು ಸೇವೆಗಳನ್ನು ರೂಢಿಸಿಕೊಳ್ಳುತ್ತಾರೆ<br>∗ ಉತ್ತಮ ವಸ್ತುಗಳನ್ನು ಕಡಿಮೆ ದರದಲ್ಲಿ ಒದಗಿಸುವುದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಜೀವನಮಟ್ಟ ಉತ್ತಮಗೊಳಿಸುತ್ತಾರೆ<br>* ಕೈಗಾರಿಕೆಗಳ ಅಭಿವೃದ್ಧಿ<br>* ಸಂಪತ್ತಿನ ಕೇಂದ್ರೀಕರಣ ಕಡಿಮೆ ಮಾಡುತ್ತಾರೆ<br>* ರಫ್ತು ವ್ಯಾಪಾರ ಹೆಚ್ಚಿಸುತ್ತಾರೆ<br>* ತಾಂತ್ರಿಕತೆಯ ಬದಲಾವಣೆ<br>(ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| V. | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** $4 \times 4 = 16$ | |
| 34. | ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳನ್ನು ವಿವರಿಸಿ.<br>***ಉತ್ತರ :***<br>* ಶಾಲಾ, ಕಾಲೇಜುಗಳನ್ನು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು<br>* ಚುನಾವಣೆಗಳನ್ನು ಬಹಿಷ್ಕರಿಸುವುದು<br>* ಗೌರವ ಪದವಿಗಳನ್ನು ಮತ್ತು ಸ್ಥಾನಗಳನ್ನು ಹಿಂದಿರುಗಿಸುವುದು<br>* ಸ್ಥಳೀಯ ಸಭೆಗಳಿಗೆ ರಾಜೀನಾಮೆ<br>* ಸರ್ಕಾರಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವುದು<br>* ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು<br>* ಕೈಮಗ್ಗದ ನೇಕಾರಿಕೆಯನ್ನು ಉತ್ತೇಜಿಸುವುದು<br>* ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು<br>* ಹಿಂದೂ–ಮುಸ್ಲಿಂರ ನಡುವೆ ಐಕ್ಯತೆ ಸಾಧಿಸುವುದು<br>* ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು<br>* ಮಹಿಳೆಯರ ಸಬಲೀಕರಣ<br>* ಖಾದಿಯನ್ನು ತಯಾರಿಸುವುದು<br>(ಯಾವುದಾದರೂ ಎಂಟು ಅಂಶಗಳು) $8 \times \frac{1}{2}$ | 4 |
| 35. | 1857 ರ ಕ್ರಾಂತಿಗೆ ಕಾರಣವಾದ ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳನ್ನು ವಿವರಿಸಿ.<br>***ಅಥವಾ***<br>ಸ್ವಾತಂತ್ರ್ಯ ಚಳುವಳಿಯಲ್ಲಿ ಉದಾರ ರಾಷ್ಟ್ರೀಯ ವಾದದ ( Liberal Nationalism ) ಕಾಲವನ್ನು ವಿವರಿಸಿ.<br>***ಉತ್ತರ :***<br>*ರಾಜಕೀಯ ಕಾರಣ :*<br>* ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ದೇಶಿಯ ರಾಜರು ತಮ್ಮ ರಾಜ್ಯಗಳ ಕಳೆದುಕೊಂಡರು<br>* ಸತಾರ, ಜೈಪುರ, ಝಾನ್ಸಿ ಮುಂತಾದವು ಬ್ರಿಟಿಷರ ವಶವಾದವು<br>* ನವಾಬರಿಗಿದ್ದ ರಾಜಪದವಿಗಳನ್ನು ರದ್ದುಪಡಿಸಿದರು<br>* ಮೊಘಲ ಚಕ್ರವರ್ತಿ ಮತ್ತು ಔದ್‌ನ ನವಾಬರನ್ನು ಪದಚ್ಯುತಿಗೊಳಿಸಿದರು<br>* ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು<br>*ಆಡಳಿತಾತ್ಮಕ ಕಾರಣ :*<br>* ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು<br>* ಹೊಸ ಕಾನೂನಿನಲ್ಲಿ ಪಕ್ಷಪಾತವಿತ್ತು<br>* ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು<br>* ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು<br>* ಹೊಸ ಕಾನೂನಿನ ಆಶಯ ಜನರಿಗೆ ಅರಿವಾಗಲಿಲ್ಲ<br>(ಯಾವುದಾದರೂ ಎಂಟು ಅಂಶಗಳು) 8 × ½ | 4 |
| | ***ಅಥವಾ*** | |
| | * ಬ್ರಿಟಿಷರ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ<br>* ಸಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿ<br>* ಜನರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಿದರು<br>* ಸಭೆ ಮತ್ತು ಚರ್ಚೆಗಳನ್ನು ನಡೆಸಿ ಸರ್ಕಾರಕ್ಕೆ ಮನವಿ<br>* ಕೈಗಾರಿಕೆಗಳ ಅಭಿವೃದ್ಧಿ ಬೇಡಿಕೆ<br>* ಸೈನಿಕ ವೆಚ್ಚವನ್ನು ಕಡಿಮೆ ಮಾಡಲು ಬೇಡಿಕೆ<br>* ಉತ್ತಮ ಶಿಕ್ಷಣ ಒದಗಿಸಲು ಬೇಡಿಕೆ<br>* ಬಡತನ ಪರಿಹಾರ ಕಾರ್ಯಕ್ರಮಗಳ ಜಾರಿಗೆ ಮನವಿ<br>* ಬ್ರಿಟಿಷರ ಆಳ್ವಿಕೆಯಿಂದಾದ ದುಷ್ಪರಿಣಾಮಗಳ ಅವಲೋಕನೆ<br>* ಸಂಪತ್ತಿನ ಸೋರುವಿಕೆಯನ್ನು ಅಂಕಿ–ಅಂಶಗಳೊಂದಿಗೆ ವಿವರಣೆ<br>* ದಾದಾಬಾಯಿ ನವರೋಜಿಯ ಸಂಪತ್ತಿನ ಸೋರುವಿಕೆ ಸಿದ್ಧಾಂತ<br>* ಡಬ್ಲ್ಯೂ.ಸಿ. ಬ್ಯಾನರ್ಜಿ, ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಪ್ರಮುಖ ನಾಯಕರು<br>(ಯಾವುದಾದರೂ ಎಂಟು ಅಂಶಗಳು) 8 × ½ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿಯು ಮಹಿಳೆಯರು ಉತ್ತಮ ಸಾಧನೆ ಮಾಡಲು ಪೂರಕವಾಗಿವೆ. ಹೇಗೆ ?<br>***ಉತ್ತರ :***<br>✳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>✳ ಮಹಿಳೆಯರಿಗೆ ಉತ್ತಮ ಆರೋಗ್ಯ, ಶಿಕ್ಷಣ, ಸ್ಥಾನಮಾನ<br>✳ ಮಹಿಳಾ ಶಿಕ್ಷಣಕ್ಕೆ ಒತ್ತು<br>✳ ಬಾಲ್ಯವಿವಾಹ ನಿಷೇಧ ಕಾಯ್ದೆ<br>✳ ವರದಕ್ಷಿಣೆ ನಿಷೇಧ ಕಾಯ್ದೆ<br>✳ ಸ್ತ್ರೀಶಕ್ತಿ, ಮಹಿಳಾ ಮಂಡಲ, ಸ್ವ–ಸಹಾಯ ಸಂಘಗಳು<br>✳ ಮಹಿಳಾ ಆಯೋಗದ ರಚನೆ<br>✳ ಶಾಸಕಾಂಗ ಮತ್ತು ಸಂಸತ್ತಿನಲ್ಲಿ ಮಹಿಳಾ ಮೀಸಲಾತಿಗೆ ಯತ್ನ<br>✳ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ<br>✳ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ<br>(ಯಾವುದಾದರೂ ಎಂಟು) 8 × ½ | 4 |
| 37. | ಗೋಧಿ ಹಾಗೂ ಕಬ್ಬು ಬೆಳೆಯಲು ಬೇಕಾಗಿರುವ ಅಗತ್ಯ ಅಂಶಗಳೇನು ?<br>***ಉತ್ತರ :***<br>***ಗೋಧಿ***<br>✳ ಸಮಶೀತೋಷ್ಣ ವಲಯ<br>✳ $10^{o}$ ಸೆ ರಿಂದ $15^{o}$ ಸೆ ಉಷ್ಣಾಂಶ<br>✳ 50 ಸೆಂ.ಮೀ. ರಿಂದ 70 ಸೆಂ.ಮೀ. ವಾರ್ಷಿಕ ಮಳೆ<br>✳ ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು<br>✳ ಉತ್ತರದ ಮೈದಾನಗಳು ಬಹು ಸೂಕ್ತ<br>***ಕಬ್ಬು***<br>✳ ನೀರಾವರಿ ಅಗತ್ಯವಾಗಿದೆ<br>✳ $21^{o}$ ಸೆ ರಿಂದ $26^{o}$ ಸೆ ಉಷ್ಣಾಂಶ<br>✳ 100 ಸೆಂ.ಮೀ. ರಿಂದ 150 ಸೆಂ.ಮೀ. ವಾರ್ಷಿಕ ಮಳೆ<br>✳ ಮೆಕ್ಕಲು ಮತ್ತು ಜೇಡಿ ಮಣ್ಣು<br>✳ ದಕ್ಷಿಣ ಭಾರತ ಬಹು ಸೂಕ್ತವಾಗಿದೆ<br>(ಪ್ರತಿಯೊಂದರಲ್ಲೂ ಯಾವುದಾದರೂ ನಾಲ್ಕು ಅಂಶಗಳು) 1 + 1 | 4 |
| VI. 38. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :**<br>a) $82\frac{1}{2}^{o}$ ಪೂರ್ವ ರೇಖಾಂಶ<br>b) ನರ್ಮದಾ ನದಿ<br>c) ಭಾಕ್ರನಂಗಲ್ ಯೋಜನೆ<br>d) ಮುಂಬೈ ಹೈ | 1+4=5 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|




***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಹೇಗೆ ಉಪಯುಕ್ತವಾಗಿವೆ ?

- ನೀರಾವರಿ ಪೂರೈಕೆ
- ಪ್ರವಾಹಗಳ ನಿಯಂತ್ರಣ
- ಜಲವಿದ್ಯುತ್ ತಯಾರಿಕೆ
- ಮಣ್ಣಿನ ಸವೆತ ನಿಯಂತ್ರಣ
- ಒಳನಾಡಿನ ನೌಕಾಯಾನ
- ಒಳನಾಡಿನ ಮೀನುಗಾರಿಕೆ
- ಮನರಂಜನೆ ಸೌಲಭ್ಯ
- ಗೃಹ ಬಳಕೆ ಮತ್ತು ಕೈಗಾರಿಕೆಗಳಿಗೆ ನೀರು ಪೂರೈಕೆ
- ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಬಳಕೆ
- ಅರಣ್ಯ ಪೋಷಣೆ

(ಯಾವುದಾದರೂ ಹತ್ತು ಅಂಶಗಳು) 5